ಅಧ್ಯಕ್ಷರು: ನನಗೆ ಗೊತ್ತಿಲ್ಲ, ಯಾರ್ಯಾರ ಸಂಬಂಧಗಳು ಎಲ್ಲಿರುತ್ತವೆಯೋ? ನಾವು ಹೇಗೆ ಹೇಳುವುದು?

ಶ್ರೀ ವಾಟಾಳ್ ನಾಗರಾಜ್: ಆ ರೀತಿ ಗುಪ್ತದಳದವರು ಇಲ್ಲಿ ಬರುವ ಹಾಗೇ ಇಲ್ಲ. ಕಾನೂನು ಪ್ರಕಾರ ಅವರು ಬರುವ ಪ್ರಶ್ನೆಯೇ ಇಲ್ಲ. ಯಾರು ಬಂದು ಕುಳಿತಿರುತ್ತಾರೋ ಬಿಡುತ್ತಾರೋ, ಅದು ಬೇರೆ. ಅವರು ಬರುವುದಕ್ಕೆ ಅವಕಾಶವೇ ಇಲ್ಲ. ಹಿಂದೆಯೆಲ್ಲಾ ಇಂಥ ಸಂದರ್ಭ ಬಂದಾಗ ಕುಳಿತಿದ್ದಂಥ ಅವರು ಎದ್ದು ಹೋಗಿಬಿಡುತ್ತಿದ್ದರು. ಅಂಥ ಸಂದರ್ಭ ಉಂಟು. ಆದ್ದರಿಂದ ಇಲ್ಲಿ ಬರಲು ಸಾಧ್ಯವೇ ಇಲ್ಲ. ಆದರೂ ಬರುತ್ತಿದ್ದಾರೆ. ಅವರನ್ನು ನಾವು ತಡೆಯಲು ಆಗುತ್ತಿಲ್ಲ. ಹಾಗೆ ಆಗಿದೆ.

ಅಧ್ಯಕ್ಷರು: ನನಗೆ ಏನು ಸಮಸ್ಯೆ ಬಂದಿದೆ ಎಂದರೆ, ಗುಪ್ತದಳದವರು ಯಾರು ಎಂಬುದು ನನಗೆ ಗೊತ್ತಿಲ್ಲ. ಗುಪ್ತವಾಗಿಯಾದರೂ ಇಂಥವರು ಬರುತ್ತಿದ್ದಾರೆ ಎಂದು ನೀವು ನನಗೆ ತಿಳಿಸಿದರೆ ನಾನು ಅದರ ಕಡೆ ಗಮನ ಹರಿಸುತ್ತೇನೆ. ನಿಮಗೆ ಪರಿಚಯ ಇದೆ. ನೀವು ಹೇಳುತ್ತೀರಿ. ನನಗೆ ಐಡಿಯಾನೇ ಇಲ್ಲ. ಅವರು ಯಾರು ಎಂದು.

ಶ್ರೀ ವಾಟಾಳ್ ನಾಗರಾಜ್: ಅವರು ಬರುವುದರಿಂದ ನನಗಾಗಲೀ, ನಂಜೇಗೌಡರಿಗಾಗಲಿ ತೊಂದರೆಯೇನಿಲ್ಲ. ಅದರ ಬಗ್ಗೆ ನಾವೇನೂ ತಲೆ ಕೆಡಿಸಿಕೊಂಡಿಲ್ಲ ತಾವೇನೋ ಹೇಳಿದಿರಲ್ಲಾ, ಅದರ ಬಗ್ಗೆ, ನಿಮಗೇನಾದರೂ ಬೇಕಾದರೆ ನಾವು ಗುರುತು ಮಾಡಿಕೊಡುತ್ತೇವೆ.

ಅಧ್ಯಕ್ಷರು: ನಿಮ್ಮಿಬ್ಬರಿಗೂ ತೊಂದರೆಯಾಗದಿದ್ದ ಮೇಲೆ ನನಗೇನು ತೊಂದರೆಯಾಗುತ್ತದೆ.

ಮಾನ್ಯ ಸದಸ್ಯರು: ಸನ್ಮಾನ್ಯ ಅಧ್ಯಕ್ಷರೇ, ಈ ರೀತಿ ಬರುವವರು ಸನ್ಮಾನ್ಯ ಹಿರಿಯ ಸದಸ್ಯರಿಗೆ ಹೇಳಿ ಬಂದಿದ್ದಾರೆ ಎಂದು ಕಾಣುತ್ತದೆ.

ಅಧ್ಯಕ್ಷರು: ಈಗ ಶ್ರೀ ಅಲ್ಲಂ ವೀರಭದ್ರಪ್ಪನವರು ತಾವು ಪ್ರಸ್ತಾಪ ಮಾಡಿ. ಅದಕ್ಕಿಂತ ಮುಂಚೆ ಒಂದು ನಿಮಿಷ, ಯಡಿಯೂರಪ್ಪನವರು ಯಾವುದೋ ಒಂದು ವಿಷಯ ಹೇಳುತ್ತಾರೆ.

(ಇ) ಗುಲ್ಬರ್ಗಾ ಜಿಲ್ಲೆಯ ಆಳಂದ ಮತ್ತು ಸೇಡಂನಲ್ಲಿ ಖೂನಿಯಾಗಿರುವ ವಿಚಾರ.

+ ಶ್ರೀ ಬಿ.ಎಸ್.ಯಡಿಯೂರಪ್ಪ: ಸನ್ಮಾನ್ಯ ಅಧ್ಯಕ್ಷರೇ, ಆಗಸ್ಟ್ 18ನೇ ತಾರೀಖು ಶಹಾಪುರದಲ್ಲಿ ಹರಿಜನ ಯುವಕನೊಬ್ಬ ಸವರ್ಣೀಯ ಯುವತಿಯನ್ನು ಕೀಟಲೆ ಮಾಡಿದೆ. ಆ ಘಟನೆಯ ಹಿನ್ನೆಲೆಯಲ್ಲಿ ಗೋಲೀಬಾರ್ ನಡೆದು ಒಬ್ಬ ವ್ಯಕ್ತಿ ಸತ್ತಿರುವಂಥಾದ್ದು ಅನೇಕ ಯುವಕರಿಗೆ ತೀವ್ರ ಗಾಯವಾಗಿರುವಂಥಾದ್ದು, ಸವರ್ಣೀಯ ಯುವಕ ಭೀಮಣ್ಣ ಎನ್ನುವವನು ಸಾವಿಗೀಡಾಗಿರುವಂಥಾದ್ದು, ಅಲ್ಲಿ ಒಂದು ಪ್ರಕ್ಷುಬ್ಧ ವಾತಾವರಣ ಇದೆ ಎಂದು ಎಲ್ಲಾ ಪತ್ರಿಕೆಗಳ ಮುಖಪುಟದಲ್ಲಿ ಬಂದಿದೆ. ನಾನು

ಹೇಳುವಂಥಾದ್ದು ಏನೆಂದರೆ, ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಸಹ ಇಂಥ ಘಟನೆಗಳು ಮತೆಮತ್ತೆ ಮರುಕಳಿಸುತ್ತಿವೆ. ಮನ ಪರಿವರ್ತನೆ ಮಾಡುವಂಥ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನ ನಮ್ಮ ಕಡೆಯಿಂದ ಇದುವರೆಗೆ ಆಗಿಲ್ಲ. ಹರಿಜನ ಯುವಕ ಇರಬಹುದು, ಬೇರೆ ಜನಾಂಗದ ಯುವಕ ಇರಬಹುದು, ಯಾರೋ ಮುಗ್ಧ ಹೆಣ್ಣುಮಕ್ಕಳನ್ನು ಅಪಮಾನ ಮಾಡುವಂಥಾದ್ದು, ಕೀಟಲೆ ಮಾಡುವಂಥಾದ್ದು ಇದು ಎಲ್ಲರೂ ತಲೆತಗ್ಗಿಸಬೇಕಾದಂಥ ಸಂಗತಿ. ಇಲ್ಲಿ ಅವರ್ಯಾರು, ಇವರ್ಯಾರು ಎನ್ನುವ ಪ್ರಶ್ನೆಗಿಂತ, ಈ ರೀತಿಯ ಘಟನೆಗಳು ಮರುಕಳಿಸದಂತೆ ಮನಪರಿವರ್ತನೆ ಮಾಡುವಂಥ ಕೆಲಸ ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಇದುವರೆಗೂ ಆಗಿಲ್ಲ. ಆ ರೀತಿಯ ಒಂದು ತರಬೇತಿಯನ್ನು ಪೋಲೀಸ್ ಇಲಾಖೆಯ ಅಧಿಕಾರಿಗಳಿಗೆ ಕೊಟ್ಟು ಆ ಕಡೆ ವಿಶೇಷವಾದ ಗಮನ ಕೊಡುವಂಥಾದ್ದು ಆಗಿಲ್ಲ. ಆದ್ದರಿಂದ ಘಟನೆ ಏನು? ಪ್ರಕ್ಷುಬ್ಧ ವಾತಾವರಣ ಇರುವಂಥಾದ್ದು ನಿಜವೇ? ಈ ರೀತಿ ಗೋಲಿಬಾರ್‌ನಿಂದ ಎಷ್ಟು ಜನ ಅಲ್ಲಿ ಸತ್ತಿದ್ದಾರೆ? ಈಗ ವಾತಾವರಣ ಹೇಗೆ ಇದೆ? ಈ ಗೋಲೀಬಾರನ್ನು ತಡೆಯುವುದಕ್ಕೆ ಒಂದು ವಿಶೇಷವಾದಂಥ ಪ್ರಯತ್ನ ಮಾಡಬಹುದಾಗಿತ್ತು. ಅನಾವಶ್ಯಕವಾಗಿ ಗೋಲೀಬಾರ್ ಮಾಡಿ ಭೀಮಣ್ಣ ಎನ್ನುವ ಸವರ್ಣೀಯ ಯುವಕ ಸತ್ತಿರುವಂಥಾದ್ದು, ಇನ್ನಿಬ್ಬರು ಯುವಕರ ಮೇಲೆ ಈ ಗೋಲೀಬಾರ್‌ನಿಂದ ತೀವ್ರತರ ಹಲ್ಲೆಯಾಗಿರುವಂಥಾದ್ದು ಈ ರೀತಿಯ ಸುದ್ದಿಗಳು ಪತ್ರಿಕೆಗಳ ಮುಖಪುಟದಲ್ಲಿ ಬಂದಿವೆ. ನಾನು ಅದರ ಬಗ್ಗೆ ಪ್ರಶ್ನೆ ಕೇಳುವುದಕ್ಕೆ ಮುಂಚೆ, ಕ್ಲಾರಿಫಿಕೇಷನ್ ಕೇಳುವುದಕ್ಕೆ ಮುಂಚೆ, ವಾಸ್ತವಿಕ ಸ್ಥಿತಿ ಏನು? ಯಾವ ಸಂದರ್ಭದಲ್ಲಿ ತಾವು ಗೋಲೀಬಾರ್ ಮಾಡಿದಿರಿ? ಎಷ್ಟು ಜನ ಸತ್ತಿದ್ದಾರೆ? ಇಬ್ಬರು ಗಾಯಾಳುಗಳ ಪರಿಸ್ಥಿತಿ ಏನಾಗಿದೆ? ಎಷ್ಟು ಜನರನ್ನು ಬಂಧನ ಮಾಡಿದ್ದೀರಿ? ನಡೆದಂಥ ವಾಸ್ತವಿಕ ಸ್ಥಿತಿ ಏನು? ಎಂದು ನಾನು ಆ ಘಟನೆಯ ಬಗ್ಗೆ ವಿವರಗಳನ್ನು ಕೇಳುತ್ತಿದ್ದೇನೆ. ನಂತರ ನಾನು ಕ್ಲಾರಿಫಿಕೇಷನ್ ಕೇಳಲು ಅನುಕೂಲವಾಗಬಹುದು. ಗೃಹ ಸಚಿವರು ಇಲ್ಲಿದ್ದಾರೆ, ಅವರು ಉತ್ತರ ನೀಡಲಿ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೇ, ನಾನು ಇದನ್ನು ಪ್ರಸ್ತಾಪ ಮಾಡಬೇಕು ಎಂದು ಮುಂಚೆಯೇ ನಿರ್ಣಯ ಮಾಡಿದ್ದೆ. ಆದರೆ ಅವರು ಒಂದು ಹೇಳಿಕೆ ಕೊಡುತ್ತೇವೆ ಎಂದು ಹೇಳಿದರು. ಏಕೆಂದರೆ, ಮೊನ್ನೆ ನಾನು ಗುಲ್ಬರ್ಗಾ ಜಿಲ್ಲೆಯ ಆಳಂದ ಮತ್ತು ಸೇಡಂನಲ್ಲಿ ಖೂನಿಗಳು ನಡೆದಿವೆ ಎನ್ನುವುದರ ಬಗ್ಗೆ ನಿನ್ನೆ ಪ್ರಸ್ತಾಪ ಮಾಡಿದ್ದೆ. ಆಗ ನಿನ್ನೆ ಉಪ ಮುಖ್ಯಮಂತ್ರಿಗಳು ಹೇಳಿದ್ದರು, ರಾಜ್ಯದ ಗೃಹ ಸಚಿವರು ಬರುತ್ತಾರೆ, ಅವರು ಇದಕ್ಕೆ ಉತ್ತರ ಕೊಡುತ್ತಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದರು. ಅದಕ್ಕೆ ನಾನು ಕಾಯ್ದುಕೊಂಡು ಕುಳಿತಿದ್ದೆ. ಈಗ ಶ್ರೀಮಾನ್ ಯಡಿಯೂರಪ್ಪನವರು ಈ ಪ್ರಶ್ನೆಯನ್ನು ಎತ್ತಿದ್ದಾರೆ.

12.40 ಪಿ.ಎಂ

ಈಗ ಏನಾಗಿದೆ ಎಂದರೆ ಇಂತಹ ಕೆಲವು ಘಟನೆಗಳು ನಡೆದಿದ್ದಕ್ಕಾಗಿ ನಾವು ಕಾರಣಾಂತರದಿಂದ ತಲೆ ತಗ್ಗಿಸತಕ್ಕಂಥ ಒಂದುಪರಿಸ್ಥಿತಿ ಬಂದಿದೆ. ಆದರೆ ನನ್ನ ಕಳಕಳಿಯ ವಿನಂತಿ ಏನೆಂದರೆ ಅದು ಮಿಡಿಯಾ ಇರಬಹುದು, ಸೋಷಿಯಲ್ ವರ್ಕರ್ ಇರಬಹುದು, ರಾಜಕೀಯ ವ್ಯಕ್ತಿಗಳು ಇರಬಹುದು ಇಂತಹ ಘಟನೆಗಳು ಏನು ನಡೆಯುತ್ತವೆ, ಅದು ಪೊಲಿಸ್ಟ್ ಮಾಡತಕ್ಕಂಥದ್ದು ಇರಬಹುದು, ರೇಪ್ ಇರಬಹುದು ಅದಕ್ಕೆ ಬಣ್ಣವನ್ನು ಕೊಟ್ಟು ಜಾಸ್ತಿ ಹೈಲೈಟ್ ಮಾಡಿದರೆ ಅದರಿಂದ ಇಡೀ ಸಮಾಜದಲ್ಲಿ ಒಂದು ಕೆಟ್ಟ ವಾತಾವರಣ ಬರುತ್ತದೆ. ಮತ್ತು ಇಡೀ ರಾಜ್ಯದಲ್ಲಿ ಏನೋ ಒಂದು ನಡೆದಿದೆ ಎನ್ನತಕ್ಕಂಥ ಒಂದು ವಾತಾವರಣ ತಯಾರಾಗಿದೆ ಎಂದು ಈ ನೆಲದ ಕೆಳಗೆ ಬಿದ್ದ ಜನ, ಅವರ ಬಗ್ಗೆ ಮೊದಲೇ ಅನುಕಂಪ ಕಡಿಮೆ, ಅದರೊಳಗೆ ಇಂತಹ ಘಟನೆಗಳನ್ನು ನಾವು ಹೆಚ್ಚಿನ ರೀತಿಯಲ್ಲಿ ಹೈಲೈಟ್ ಮಾಡಿದರೆ, ಓ ಏನೋ ನಡೆದಿದೆ ನಾವು ಅವರಿಗೆ ಕೊಡುವ ಸೌಲಭ್ಯಗಳು ಸರಿ ಇಲ್ಲ ಅಥವಾ ಅವರ ಬಗ್ಗೆ ನಾವು ತೋರಿಸಬೇಕಾದ ಅನುಕಂಪ ಸರಿ ಇಲ್ಲ ಅಥವಾ ಅವರಿಗೆ ಸಹಾಯ ಮಾಡತಕ್ಕಂಥದ್ದು ಸರಿ ಇಲ್ಲ ಎನ್ನತಕ್ಕಂಥ ಭಾವನೆ ಇಡೀ ಸಮಾಜದಲ್ಲಿ ಮೂಡಿ ಈ ಒಂದು ಸಮಾಜದಲ್ಲಿ ಅವರ ಬಗ್ಗೆ ಒಂದು ಕೆಟ್ಟ ಭಾವನೆ ಬರುತ್ತದೆ. ಒಂದು ದೃಷ್ಟಿಯಿಂದ ಪ್ರಿಜ್ಯುಡೀಸ್ ಆಗಿ ನೋಡಿದೆ ಹಾಗೆ ಆಗುತ್ತದೆ. ಅದಕ್ಕಾಗಿ ದಯವಿಟ್ಟು ಇದಕ್ಕೆ ಹೆಚ್ಚಿನ ಜಾತಿ ಬಣ್ಣ ಕೊಡಬೇಡಿ. ಕೆಲವು ತಪ್ಪು ಮಾಡಿದವರಿಗೆ ಶಿಕ್ಷೆ ಆಗಲೇ ಬೇಕು ಆ ವಿಚಾರದ ಪ್ರಶ್ನೆ ಇಲ್ಲ. Murderer is a murderer, thief is a thief. ಅವರು ಯಾರೇ ಇರಬಹುದು. dacoit is a dacoit ಆದರೆ ಡಕಾಯಿತರಿಗೆ ಆ ಹೆಸರಿನಿಂದ ಕರೆಯುವುದು ಆಗಬಾರದು. ಇವನು ಹರಿಜನ ಡಕಾಯಿತ, ಇವನು ಲಿಂಗಾಯಿತ ಡಕಾಯಿತ, ಇವನು ಕುರುಬ ಡಕಾಯಿತ, ಕ್ಷತ್ರಿಯ ಡಕಾಯಿತ ಎಂದು ಹೀಗೆ ಹೆಸರನ್ನು ಕೊಡಬಾರದು. ಡಕಾಯಿತ ಎಂದರೆ ಆತ ಡಕಾಯಿತ, ಆತನಿಗೆ ಶಿಕ್ಷೆ ಆಗಲೇ ಬೇಕು. ಅವನಿಗೆ ಯಾವ ರೀತಿಯಾಗಿ ಶಿಕ್ಷೆ ಕೊಡಬೇಕೋ, ಅಥವಾ ಈ ಸಮಾಜದಲ್ಲಿ ಅವನಿಗೆ ಯಾವ ರೀತಿಯಾಗಿ ಗುರಿ ಮಾಡಬೇಕು ಅದನ್ನು ಮಾಡಿ, ಸರ್ಕಾರದವರು ಅವರ ಮೇಲೆ ಕ್ರಮ ತೆಗೆದುಕೊಳ್ಳಲಿ ಆದರೆ ಅದರ ಹೆಸರಿನಲ್ಲಿ ಮಾಡಿದರೆ ಬಡವರಿಗೆ, ದಲಿತರಿಗೆ ಅಲ್ಲಿರತಕ್ಕಂಥ ಮುಗ್ಧ ಜನರಿಗೆ ಅನ್ಯಾಯವಾಗುತ್ತದೆ.

(ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿ)ರವರು ಪೀಠವನ್ನಾಲಂಕರಿಸಿದರು)

ಮತ್ತು ಪೋಲೀಸ್ ಅಧಿಕಾರಿಗಳು ಕೂಡ ನಿರಪರಾಧಿ ಜನರ ಮೇಲೆ ತಿಳಿದೋ ತಿಳಿಯದೆಯೋ ಫೈರಿಂಗ ಮಾಡಿದ್ದಾರೆ. ಆ ಕಾರಣದಿಂದ ಇವೊತ್ತು ವೆಂಕಪ್ಪ ಎ. ಹಮಾಲಿ ಎಂಬುವರು ತೀರಿಕೊಂಡಿದ್ದಾರೆ. ಇದರ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ.

"death man has been identified as A Venkappa Hamali while the injured are Vijayakumar and Bhimaraya"

ಇದರ ಬಗ್ಗೆ ಕೂಡ ಇವರು ಕಂಟ್ರೋಲ್ ಮಾಡಬೇಕು. ಅಂತಹ ಕೆಲವು ಸಣ್ಣಪುಟ್ಟ ಘಟನೆಗಳು ಅಂದರೆ 500-1000 ಜನರಿಗೆ ಕಂಟ್ರೋಲ್ ಮಾಡತಕ್ಕಂಥ ಶಕ್ತಿ ನಮ್ಮ ಪೋಲೀಸ್ ಹತ್ತಿರ ಅಥವಾ ಸರ್ಕಾರದ ಹತ್ತಿರ ಇಲ್ಲ ಎಂದರೆ ಹೇಗೆ ಅಧ್ಯಕ್ಷರೇ? ಪ್ರತಿಯೊಂದಕ್ಕೂ ಫೈರಿಂಗ್ ಎಂದರೆ, ಹೇಗೆ? ಮೊದಲು ಏನಾದರೂ ಟಿಯರ್ ಗ್ಯಾಸ್ ಹಾಕಿದ್ದಾರಾ? ಲಾಠಿ ಚಾರ್ಜ್ ಮಾಡಿದ್ದಾರಾ? ಇಲ್ಲ ಓಡಿಸುವುದಕ್ಕೇನಾದರು ಪ್ರಯತ್ನ ಮಾಡಿದ್ದಾರಾ? ಅದು ಏನೂ ಇಲ್ಲದೆ ಸಡನ್ನಾಗಿ ಫೈರಿಂಗ್ ಮಾಡುವುದು ಹೆದರಿಸುವುದು ಮಾಡುವುದು ಮಾಡಿದರೆ ಬೇರೆಯವರ ಮನಸ್ಸಿನಲ್ಲಿ ಏನಾಗುತ್ತದೆ, ಅದರ ಸಿಟ್ಟು ಕೂಡ ಬಡವರ ಮೇಲೆ ಹೋಗುತ್ತದೆ. ಆದಕಾರಣ ಅದರ ಬಗ್ಗೆ ತಾವು ಒಂದು ತಿಳಿವಳಿಕೆಯನ್ನು ಸದನಕ್ಕೆ ಕೊಡಬೇಕಾಗುತ್ತದೆ. ಇದರ ಬಗ್ಗೆ ಸಂಪೂರ್ಣ ಮಾಹಿತಿ ಕೊಡಬೇಕು. ಒಂದು ವೇಳೆ ಪೋಲೀಸ್ ಅಧಿಕಾರಿಗಳ ತಪ್ಪು ಇದ್ದರೆ ಅವರ ಮೇಲೂ ಕೂಡ ಆ್ಯಕ್ಷನ್ ತೆಗೆದುಕೊಳ್ಳಬೇಕು. ಅಥವಾ ಯಾರಾದರೂ ಮೊಲೆಸ್ಟ್ ಮಾಡತಕ್ಕಂಥ ಪ್ರಯತ್ನ ಮಾಡಿದರೆ ಅವನಿಗೂ ಕೂಡ ಶಿಕ್ಷೆ ಆಗಬೇಕು. ಆದರೆ ಇವರ ಹೆಸರಿನಲ್ಲಿ ಬಡವರಿಗಾಗಲೀ, ಹರಿಜನರಿಗಾಗಲೀ ತೊಂದರೆಯಾಗತಕ್ಕಂಥ ಪ್ರಯತ್ನ ನಡೆಯಬಾರದು. ಹಾಗೂ ಅವರ ಮನೆ ಲೂಟಿ ಮಾಡತಕ್ಕಂಥದ್ದು. ಸುಡತಕ್ಕಂಥದ್ದು ಆಗಬಾರದು. ಅದಕ್ಕಾಗಿ ಅದರ ಬಗ್ಗೆ ಸ್ಪಷ್ಟವಾದಂಥ ಒಂದು ಹೇಳಿಕೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ರೋಷನ್ ಬೇಗ್ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಹಿರಿಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಷಯದ ಬಗ್ಗೆ ಡೀಟೇಲಾಗಿ ಒಂದು ಸ್ಟೇಟಮೆಂಟನ್ನು ಮಾಡುತ್ತೇನೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಆಯಿತು ಅದನ್ನೆಲ್ಲಾ ತರಿಸಿ ಕೊಡಿ. ಆದರೆ ಅಳಂದ್ ಹಾಗೂ ಸೇಡಂನಲ್ಲಿ ದತ್ತಪ್ಪ ಹಾಗೂ ಮೈಲಾರಪ್ಪರವರ ಮರ್ಡರ್ ಬಗ್ಗೆ ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಹೇಳಿದ್ದರು. ಅದನ್ನಾದರು ಕೊಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಉಪಾಧ್ಯಕ್ಷರೆ, ಸರ್ಕಾರದವರು ಸಾಧ್ಯವಾದಷ್ಟು ಉತ್ತರವನ್ನು ಕೊಡುತ್ತಾರೆ. ಆದರೆ ಸದನ ನಡೆಯುವಾಗ ಶಹಾಪೂರದಲ್ಲಿ ಆದಂಥ ಘಟನೆ, ಅಲ್ಲಿ ಹೆಣ್ಣುಮಗಳ ಮೇಲೆ ಆದಂಥ ಘಟನೆಯಿಂದ ಗೋಲೀಬಾರ್ ಆಗಿ ಜನ ಸತ್ತಿರುವುದರಿಂದ ನಾವು ಪ್ರಸ್ತಾಪ ಮಾಡದೇ ಇದ್ದರೆ ಯಾವಾಗ ಮಾಡುವುದಕ್ಕೆ ಆಗುತ್ತದೆ. ಇಂತಹ ಗಂಭೀರವಾದಂಥ ವಿಷಯಗಳನ್ನು ನೀವು ತಕ್ಷಣ ತರಿಸಿ ಕೊಟ್ಟರೆ ಒಳ್ಳೆಯದಾಗುತ್ತದೆ. ನಿಮ್ಮಲ್ಲಿ ಸಿಬ್ಬಂದಿ ಇದ್ದಾರೆ, ಇನ್‌ಫಾರ್ಮೆಶನ್ ಇದೆ ಆದಕಾರಣ ತಕ್ಷಣ ತರಿಸಿ ಕೊಟ್ಟರೆ ಒಳ್ಳೆಯದು. ಏಕೆಂದರೆ ನಾಳೆ ಪತ್ರಿಕೆಯಲ್ಲಿ ಬರುತ್ತದೆ ವಾಸ್ತವವಾಗಿ ನಾವು ಸದನದಲ್ಲಿ ಪ್ರಸ್ತಾಪ ಮಾಡಿದ ಹಾಗೆ ಆಗುತ್ತದೆ. ವಿರೋಧ ಪಕ್ಷದ ನಾಯಕರು ಮಾತನಾಡುವಂಥ ಕಾಲದಲ್ಲಿ ಯಾವುದೋ

ಸಮಾಜದಲ್ಲಿನ ಹೆಣ್ಣುಮಗಳ ಮೇಲೆ ಹಲ್ಲೆಯಾಗುತ್ತದೆ, ಗೋಲಿಬಾರ್ ಆಗುತ್ತದೆ ಮತ್ತು ಅದೇ ಸಮಾಜದವರು ಸಾಯುತ್ತಾನೆ ಈ ತರಹ ಒಂದು ಸಿಗ್ನಲ್ ಹೋಗುತ್ತದೆ. ಮತ್ತು ಘಟನೆಗಳು ನಡೆದಾಗ ಈತ ಹರಿಜನ, ಈತ ಅಲ್ಪಸಂಖ್ಯಾತ, ಈತ ಹಿಂದೂ ಎಂಬ ಈ ಪ್ರಶ್ನೆನೇ ಬರುವುದಿಲ್ಲ. ಮಾಡಬಾರದ್ದನ್ನು ಯಾವನಾದರೂ ಮಾಡಿದ್ದರೆ ಅದು ಅಕ್ಷಮ್ಯ ಅಪರಾಧ ಆತನನ್ನು ತಕ್ಷಣ ಬಂಧನ ಮಾಡಬೇಕು. ನಾನು ಏನು ಹೇಳುವುದಕ್ಕೆ ಹೊರಟೆ ಎಂದರೆ ನಮಗೆ ಸ್ವಾತಂತ್ರ್ಯ ಬಂದು 50ವರ್ಷಗಳಾದರೂ ಈ ರೀತಿ ಮಾನಸಿಕ ಪರಿವರ್ತನೆ ಮಾಡುವಂಥದ್ದು, ಈ ತರಹ ಕಾರಣಕ್ಕೋಸ್ಕರ ಜಾತಿ ಗಲಭೆಗಳು ನಡೆಯುವುದಕ್ಕೆ ಅವಕಾಶ ಕೊಡುವಂಥದ್ದು ಮಾಡಿ ಅದನ್ನು ನಿಯಂತ್ರಣ ಮಾಡುವುದಕ್ಕೆ ಗೋಲಿಬಾರ್ ಮಾಡಿ ಪೋಲೀಸರು ತೃಪ್ತಿ ಪಡುವಂಥದ್ದು ಸರಿಯೇ ಎಂದು ಪ್ರಸ್ತಾಪ ಮಾಡಿದ್ದೇನೆ. ಅದಕ್ಕೆ ಉತ್ತರಕೊಡಿ. ಇದರ ಬಗ್ಗೆ ವಾಸ್ತವಿಕ ಸ್ಥಿತಿಯನ್ನು ಹೇಳಬೇಕೆಂದು ವಿನಂತಿ ಮಾಡುತ್ತೇನೆ.

+ ಶ್ರೀ ಆರ್.ರೋಷನ್ ಬೇಗ್ (ಗೃಹ ರಾಜ್ಯ ಸಚಿವರು): ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಗುಲಬರ್ಗಾ ಜಿಲ್ಲೆಯಲ್ಲಿ ಮೊನ್ನೆ 17ನೇ ತಾರೀಖು ನಡೆದ ಮರ್ಡರ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡುತ್ತೇನೆ.

On 17-8-97 at 1000 AM Sri. Dattappa Basappa Doddamani, president of Hadalgi Gram Panchayat while he was coming to Gulburga in a private Tempo Trax vehicle, was attacked near Vaijapur village by 7 to 8 unknown persons with daggers and sickles. The accused allegedly came in a Mahendra Commander Jeep. Sri. Dattappa sustained multiple stab injuries and died at the spot. Five other persons (5) who were travelling with Dattappa were also attacked by unknown persons. All of them escaped except one by name Kalyani R/o Nimbal village in Alland Taluk who sustained cut injuries on his left arm while escaping. In this regard a case was registered at Nimberga Police Station Cr.No.77/97 U/s 143, 147, 148, 324, 307, 302 R/W 149 IPC and section 3(X) of the SC/ST prevention of atrocities Act against unknown accused person.

Kalyani who was admitted at Government Hospital for treatment could not give any identification particulars about

the accused persons and also the registration number of the vehicle allegedly used by the assailants as he himself was running to escape from attack and could not notice it himself. The persons who accompanied the victim and ran away during attack have not been traced so far.

Immediately on receiving the information about the murder of Dattappa the Police Control room was informed. Police alerted all possible escape roots like Afzalpur Main road, Chowdapur, RTO check post at Alland, and Kadaganchi cross so that they were blocked and thorough checking was done to nab the culprits. But neither Mahendra commander Jeep nor the culprits could be traced. Superintendent of Police, Gulburga and DIGP North Eastern Range Gulburga visited the scene of offense and have supervised the investigation. Preliminary investigation reveals that the motive for murder could be rivalry with the gangs enimical to the deceased. Dattappa is a rowdy sheeted person and involved in the following cases of Nimbarga Police Station. The details are as under:

1) Cr.No:82/95 U/s 147, 148, 324, 364, 307, 506, R/w 149 IPC on the Complaint of Mallikarjun Singe on 10-8-1995.

2) Cr.No: 66/96 U/s 143, 447, 427, 504 R/w 149 IPC on the complaint of Basanna Jogann of Hadalgi village on 23-7-1996.

3) Cr.No: 80/96 U/s 147, 148, 307, 109 R/w 149 IPC on the Complaint of Srimanth Neelur of Hadalgi village on 10-9-1996.

4) Cr. No: 110/96 U/s 143, 147, 148, 307 R/w 149 IPC on the Complaint of Apparao Nealur of Hadalgi village on 30-12-96.

Apart from the above cases he was also booked U/s 107 Cr.P.C. by the Police and a Rowdy sheet has been opened since January-1997.

There was also an attack on the deceased on 10-9-1996 by Siddangouda and 5 others near Hadalgi village. In this regard a case has been registered at Nimbarga P.S. Cr.No. 81-96 U/s 147,148,307 R/w 149 IPC. The case was charge sheeted on 17-5-97. It is coming up of Trial on 3-9-97 under S.C.No.25/97.

Adequate bandobust is arranged at Alland and Hadalgi village. Efforts are continued to identify accused persons, and to arrest them; and to trace the Mahendra Commander Jeep.

MURDER OF MAILAPPA OF ALLOLI VILLAGE

On 30-6-97 at about 160 Hrs one Saibanna s/o Rudrappa Gundanawar age 30 yrs r/o village Alloli appeared before SHO Sedam PS and stated that he along with his brother and two others boarded the bus from Sedam and got down at Alloli village gate. Further, and when they were walking down towards the village, four persons of the same village namely (1) Niranjappa s/o Bhimaraya, (2) Baswanthappa s/o Basappa, (3) Shankarappa s/o Basappa, (4) Gurappa s/o Basappa all belonging to the Lingayat community and all residents of Alloli village attacked Mailappa and throttled his neck by using big boulders and killed Mailappa. They causing severe head injuries and caused his death and then they thrown the body on kacha road found in a pool of blood. They also caused injuries to the complainant Saibanna the motive for the offence is previous enemity in which the deceased Mailappa had given a complaint against the accused persons under SC/ST prevention of Attrocity Act. In addition it is also stated that also one of the accused of this incidents had been got

removed from the post of dalapati on his being involved in village fraction. The deceased was an active worker of con-I and had recently contested the taluka panchayat election and was defeated.

On the complaint of Saibanna a case in Sedam P.S.Cr.No.101/97 u/s 302 r/w 34 IPC and Sec. 3 (X) SC/ST PA ACT has been registered and further investigation taken up. On receipt of the information the then SP visited the spot and instruction were issued the I.O to arrest the accused persons immediately and the SP also got additional force deployed at appropriate places to prevent further untowards incidents in the village.

On 1/7/97 the dead body of the deceased Mailappa was handed over the family of the deceased after Post Mortum examination.

It is learnt during investigation the earlier to this incident, the deceased Mailappa the brother of accused Miranjappa s/o Bhimraya were friend. However some enimity developed between the two and deceased Mailappa got his younger brother Nagappa married to Kum.Sarasvati r/o Benknalli who a harijan by caste. It is said that she has alleged by a love affairs with one Hanmanth Thalak harijan by cast r/o Benknalli when they were studying at Bangalore. On information about the marriage the former lover of Kum.Saraswati, Hanmantha alleged made a plan to get Saraswati back to Bangalore through Baswaraj brother of one of the accused Niranjappa by paying Rs.10,000/-. On 1/2/97 the deceased Mailappa lodged a complaint against the Baswaraj s/o Bhimraya Atrocity Act and a case was registered Sedam P.S.CR.NO.18/97. This Act is said to have irritated Hanmantha and on 25/3/97 he put a fire to hay stock which belongs to Kashiralya s/o. Saibanna. In

this connection a case in Sedam Cr.No.43/97 u/s 435 IPC has also been registered and the case is P.T.

On 6/4/97 the said Hanmantha was moving in the village with an unlicensed country made pistol and catrizes. On credible information PSI Sedam arrested Hanmanth and seized the country made pistol and rounds from the possession of Hanmantha and case was registered in Sedam P.S.CR.NO.52/ 97 u/s 25 I.A. Act and charge sheet was filed against Hanmantha and Baswaraj.

In so far as the murder of Milappa is concerned Sedam Police have arrested all the 4 Persons on 5/7/97 and have produced all of them before JMFC Court Sedam. The Court has sent the accused persons to Judicial Custody. The investigation almost completed and the case is being charge sheeted early.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೇ, ನಾನು ತಮ್ಮ ಗಮನಕ್ಕೆ ತರುವುದು ಇಷ್ಟೆ. ಮಾನ್ಯಮಂತ್ರಿಗಳು ಏನು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ, ಅದನ್ನು ನೋಡಿದ ಮೇಲೆ ಏನು ಗೊತ್ತಗುತ್ತದೆ ಎಂದರೆ, ದತ್ತಪ್ಪ. ಬಸಪ್ಪ. ದೊಡ್ಡಮನೆ ಇವರದು 17ನೇ ತಾರೀಖಿನಂದು ಮರ್ಡರ್ ಆಗಿದೆ. ಅವನು ಮುಂಚೆ ರೌಡಿ ಇರಲಿಲ್ಲ ಎನ್ನತಕ್ಕದ್ದು ಅವರ ಬಗ್ಗೆ ಇರುವಂತಹ ಕೇಸ್ ರಿಜಿಸ್ಟರಾದ ದಿನಾಂಕದ ಮೇಲೆ ಹೇಳುತ್ತೇನೆ. ಅವನು ಯಾವಾಗ ಹಡಗಲಿ ಪಂಚಾಯಿತಿ ಛೇರಮನ್ ಆದ ಅಂದಿನಿಂದ ಅವನ ಮೇಲೆ ಕೇಸ್ ಫೈಲ್ ಮಾಡಲು ಶುರುಮಾಡಿದ್ದರು. ಮೊದಲನೆ ಕೇಸ್ ತಾವು ಕೊಟ್ಟಿದ್ದು 10-8-95, ಎರಡನೆಯದು 23-7-96, ಮಾರನೆಯದು 10-9-96, ನಾಲ್ಕನೆಯದು 30-12-96, ಐದನೆಯದು ಜೂನ್ 97, ಅಂದರೆ ರಾಜಕೀಯದಲ್ಲಿ ಯಾವಾಗ ಅವನು ಪ್ರಬಲವಾಗಿ ಬೆಳೆಯತಕ್ಕಂತಹ ವ್ಯಕ್ತಿಯಾದ ಅಂದಿನಿಂದ ಪೋಲೀಸ್‌ರಿಗೆ ಹೇಳಿ ಈ ರೀತಿಯ ಕೇಸ್ ಹಾಕ ತಕ್ಕಂಥದ್ದು ಮತ್ತು ಅವನನ್ನು ಗೂಂಡಾಗಿರಿಗೆ ಮತ್ತು ರೌಡಿ ಶೀಟ್‌ಗೆ ತರತಕ್ಕಂತಹ ಪ್ರಯತ್ನ ಮಾಡಿದ್ದಾರೆ. ಈ ಕೇಸ್ ರಿಜಿಸ್ಟರ್ ಮಾಡಿದ್ದನ್ನು ನೋಡಿದರೆ ಅವನು ಕೇವಲ ಎರಡೇ ವರ್ಷದಲ್ಲಿ ಗೂಂಡಾ ಆದ ಪಂಚಾಯಿತಿ ಛೇರಮನ್ ಆಗುವುದಕ್ಕಿಂತ ಮುಂಚೆ ಆತ ಗೂಂಡಾ ಇರಲಿಲ್ಲ ಎನ್ನುವುದು ತಮ್ಮ ಅಂಕಿಸಂಖ್ಯೆಯಿಂದ, ತಾರೀಖಿನಿಂದ ಈ ಕೇಸ್ ರಿಜಿಸ್ಟರ್ ಹೇಳುತ್ತದೆ. ಅಂದರೆ ಇಲ್ಲಿ ಎಷ್ಟರಮಟ್ಟಿನ ಪ್ರಿಜುಡಿಸ್ ಬೆಳೆದಿದೆ, ಒಬ್ಬ ವ್ಯಕ್ತಿ ಯಾವುದೇ ರೀತಿಯಿಂದ

ಪ್ರಯತ್ನಪಟ್ಟು ಒಂದು ಉನ್ನತವಾದಂತಹ ಜಾಗಕ್ಕೆ ಬರಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದರೆ, ಅವನನ್ನು ಕೊಲೆ ಮಾಡತಕ್ಕಂತಹ ಸಂಚು ಹೇಗೆ ನಡೆದಿದೆ ಎನ್ನುವುದಕ್ಕೆ ಇದು ಒಂದೇ ಉದಾಹರಣೆ ಸಾಕು. ಇದು ಹತ್ತಾರು ವರ್ಷಗಳಿಂದ ಅಥವಾ ಐದಾರು ವರ್ಷಗಳಿಂದ ಅವನ ಮೇಲೆ ಇತ್ತು ಎನ್ನತಕ್ಕದ್ದು ಇಲ್ಲ. ಇದು ಕೇವಲ ಎರಡೇವರ್ಷದಲ್ಲಿ ಈ ಕೇಸಸ್‌ಗಳನ್ನು ಬಿಲ್ಡ್ ಅಪ್ ಮಾಡಿದ್ದಾರೆ. ಅದನ್ನೂ ಕೂಡ ಮೂರು-ಮೂರು ತಿಂಗಳುಗಳ ಅಂತರದಲ್ಲಿ ಮಾಡಿದ್ದಾರೆ. ಅವನನ್ನು ರೌಡಿ ಶೀಟ್‌ಗೆ ಹಾಕಿ ಅವನು ರೌಡಿ ಇದ್ದ ಅದಕ್ಕೆ ಹೊಡೆದಿದ್ದಾರೆ ಎನ್ನತಕ್ಕಂಥ ಫ್ಲೀ ಅನ್ನು ಪೋಲಿಸ್‌ನವರು ತೆಗೆದುಕೊಳ್ಳುತ್ತಾರೆ; ಮತ್ತು ಯಾರು ಅವನನ್ನು ಸಹಿಸದೆ ಪ್ರಯತ್ನ ಮಾಡಿ ಖೂನಿ ಮಾಡಿದ್ದಾರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಕೇವಲ ಹೊಡೆದವರಲ್ಲ, ಹೊಡೆದು ಹೋದವರ ಹಿಂದೆ ಹಿನ್ನೆಲೆ ಏನು ಇದೆ, ಯಾರು ಹೊಡೆಸಿದ್ದಾರೆ, ಯಾವ ಗ್ಯಾಂಗ್‌ನವರು, ಏನು ಮಹಾರಾಷ್ಟ್ರದವರು ಹೊಡೆತಸಿದ್ದಾರಾ, ಏನು ಅಳಂದದವರೇ ಮಾಡಿಸಿದ್ದಾರಾ, ಅಥವಾ ಅಫಜಲ್‌ಪುರ್ ತಾಲ್ಲೂಕಿನವರು ಮಾಡಿಸಿದ್ದಾರಾ, ಯಾವ ರಾಜಕೀಯ ಪಕ್ಷದ ಮುಖಂಡರು ಇದರ ಹಿಂದೆ ಇದ್ದಾರೆ ಇದೆಲ್ಲವನ್ನೂ ಸರ್ಕಾರದವರು ಕಂಡುಹಿಡಿಯಬೇಕು. ಅದಕ್ಕೆ ನೀವು ಸಿಓಡಿ ಟೀಮ್‌ನ್ನು ಕಳುಹಿಸಿ, ಅದಕ್ಕೆ ಸಿಓಡಿ ತನಿಖೆಯನ್ನೇ ಮಾಡಿಸಬೇಕು. ಇದನ್ನು ಸಿಓಡಿಯವರಿಗೆ ಮಾತ್ರ ಕೊಡಬೇಕು ಏಕೆಂದರೆ ಈ ಲೋಕಲ್ ಪೋಲೀಸ್‌ರಿಗೆ ಕೊಟ್ಟರೆ ಸ್ಥಳೀಯ ಪೋಲೀಸ್‌ರನ್ನು ಯಾರಾದರೊಬ್ಬರ ಶಿಫಾರಸ್ಸಿನ ಮೇಲೆ ಅವರು ಒಳ್ಳೆಯರಿದ್ದಾರೆ ಎಂದು ಹೇಳಿ ಹಾಕಿಸಿಕೊಂಡಿರುತ್ತೇವೆ. ಆಗ ಆ ಪೋಲೀಸ್‌ನವರು ಅವರ ಮುಲಾಜಿನಲ್ಲಿ ಇರುವಂತಹ ಸಾಧ್ಯತೆ ಇದೆ. ಅದನ್ನು ತಪ್ಪಿಸಬೇಕು ಎಂದರೆ ನೇರವಾಗಿ ನಮ್ಮಲ್ಲಿ ಇರುವಂತಹ ಸಿಓಡಿ ಇಲಾಖೆಯಲ್ಲಿ ಯಾರು ಪ್ರಾಮಾಣಿಕ ವ್ಯಕ್ತಿಯಾಗಿದ್ದಾರೆ, ಇಂಪಾರ್ಷಿಯಲ್ ಇದ್ದಾರೆ, ಎರಡು ಗುಂಪಿಗೆ ಸಂಬಂಧ ಇಲ್ಲದವರು ಇದ್ದಾರೆ, ಅಂಥ ಮನುಷ್ಯರನ್ನು ನೀವು ತನಿಖೆಗೆ ಕಳುಹಿಸಿ. ಅವರಿಂದ ಸಿಓಡಿ ತನಿಖೆ ಮಾಡಿಸಿ, ಇದರ ಹಿಂದೆ ಯಾವ ರಾಜಕೀಯ ವ್ಯಕ್ತಿ ಇದ್ದಾರೆ, ಯಾರ ಕೈವಾಡ ಇದೆ ಅವರನ್ನು ಹಿಡಿಯುವಂತಹ ಪ್ರಯತ್ನ ಮಾಡಿ ಎಲ್ಲಿಯವರೆಗೆ ನೀವು ಅವರಿಗೆ ಶಿಕ್ಷೆ ಕೊಡುವುದಿಲ್ಲ ಅಲ್ಲಿಯವರೆಗೆ ಇಂತಹ ಅಟ್ರಾಸಿಟೀಸ್‌ಗಳು ನಿಲ್ಲುವುದಿಲ್ಲ. ಇವತ್ತು ಅವನ ತಪ್ಪು ಏನೆಂದರೆ ಪಂಚಾಯಿತಿ ಛೇರಮನ್ ಆಗಿದ್ದು. ಆ ದಿನದಿಂದ ಹಿಡಿದು ಅವನ ಮೇಲೆ ಕೇಸ್ ಫೈಲ್ ಆಗಲು ಪ್ರಾರಂಭವಾಯಿತು ಇದು ಒಂದು. ಎರಡನೆಯದು ಮೈಲಪ್ಪನದು ಏನು ತಪ್ಪು ಎಂದರೆ, ಅವನ ತಂಗಿಯ ಇನ್ಸ್‌ಡೆಂಟ್ ಕೊಟ್ಟಿದ್ದಾನೆ. ಈ ರೀತಿಯ ಲವ್ ಮ್ಯಾರೇಜ್ ಆಯಿತು, ಅವನ್ನು ಕರೆದುಕೊಂಡು ಹೋದ; ಬೆಂಗಳೂರಿಗೆ ತರಬೇಕು ಎಂದು ಮಾಡಿದ್ದ ಇದೆಲ್ಲಾ ಕಥೆ ಇರಲಿ. ಅದರ ಬಗ್ಗೆ ಅವರು ಕಂಪ್ಲೇಟ್ ಕೊಟ್ಟರೆ ನೀವು ಏನು ಆಕ್ಷನ್ ತೆಗೆದುಕೊಳ್ಳುತ್ತೀರಿ ಅಥವಾ ಅವರು ಲವ್ ಮ್ಯಾರೇಜ್ ಮಾಡಿಕೊಳ್ಳದೆ ಇದ್ದರೆ ಪೋಲಿಸ್ ಸ್ಟೇಷನ್‌ನಲ್ಲಿ ರಿಜಿಸ್ಟರ್ ಮ್ಯಾರೇಜ್ ಮಾಡಿಸಿ ಅದರ ಬಗ್ಗೆ ನನ್ನ ತಕರಾರು ಇಲ್ಲ. ಆದರೆ ಒಬ್ಬ ರಾಜಕೀಯ ವ್ಯಕ್ತಿ ಅವನು ಜನರಲ್ ಸೀಟ್ ಮೇಲೆ

ಕಂಟಿಸ್ಟ್ ಮಾಡಿ ತಾಲ್ಲೂಕಾಪಂಚಾಯಿತಿ ಚುನಾವಣೆಗೆ ನಿಂತ ವ್ಯಕ್ತಿಯನ್ನು ಇವತ್ತು ಕೊಲೆ ಮಾಡಿದ್ದಾರೆ. ಏಕೆಂದರೆ ಅವನು ಅನೇಕ ಜನರನ್ನು ಕೂಡಿಸಿಕೊಂಡು ಅವರ ಕುಂದು-ಕೊರತೆಗಳನ್ನು ತಹಸೀಲ್ದಾರ್ ಆಫೀಸ್ ಮುಂದೆ ಎಕ್ಸುಕ್ಯುಟಿವ್ ಇಂಜೀನಿಯರ್ ಮುಂದೆ ಎಲ್ಲೆಲ್ಲಿ ಸಂಬಂಧಪಟ್ಟವರು ಇದ್ದಾರೆ ಅವರ ಕಡೆ ಹೋಗಿ ಕೆಲಸ ಮಾಡಿಸುತ್ತಿದ್ದನು. ಅದಕ್ಕೆ ಅವನನ್ನು ತೆಗೆದುಹಾಕಬೇಕೆಂದು ಹೇಳಿ ಅವನ ಬಗ್ಗೆ ಬೆಂಕಿ ಹಚ್ಚಿದರು, ಅವನ ಮನೆಗೂ ಬೆಂಕಿ ಹಚ್ಚುತಕ್ಕ ಪ್ರಯತ್ನ ಮಾಡಿದ್ದರು. ಇನ್ನು ಅನೇಕ ತೊಂದರೆಗಳನ್ನು ಕೊಡಲು ಪ್ರಯತ್ನ ಮಾಡಿದ್ದಾರೆ ಎನ್ನತಕ್ಕಂಥ ನಿಮ್ಮ ಹೇಳಿಕೆಯಲ್ಲಿ ಮತ್ತು ಪೋಲೀಸ್ ಹೇಳಿಕೆಯಲ್ಲಿ ಆ ಮಾತು ಬಂದಿದೆ. ಆದ್ದರಿಂದ ಈ ಎಲ್ಲಾ ತನಿಖೆ ನಿಷ್ಪಕ್ಷಪಾತವಾಗಿ ಆಗಬೇಕು. ಇದು ಸುಮಾರು ಒಂದೆರಡು ವರ್ಷದಿಂದ ಸತತವಾಗಿ ಆ ಭಾಗದಲ್ಲಿ ಇಂಥ ಮರ್ಡರ್‌ಗಳು ಆಗುತ್ತಿವೆ. ಏಕೆ? ಹಿಂದೆ ಕಡೇ ಪಕ್ಷ ಹೆದರುತ್ತಿದ್ದರು, ಆದರೆ ಈಗ ಆ ಹೆದರಿಕೆಯೂ ಕೂಡ ಇಲ್ಲ. ಮರ್ಡರ್ ಮಾಡುವವರಿಗೂ ಹೆದರಿಕೆ ಇಲ್ಲ ಮತ್ತು ಸರ್ಕಾರಕ್ಕೆ ಕೂಡ ಇದರ ಬಗ್ಗೆ ಆಲೋಚನೆಯಿಲ್ಲ. ಇದರ ಬಗ್ಗೆ ಬಿಗಿ ನಿಲುವು ಕೂಡ ಇಲ್ಲ. ಹೀಗಿರುವುದರಿಂದಲೇ ಹೊಡೆದರೆ ಯಾರೂ ಕೇಳುವುದಿಲ್ಲವೆಂದು ತಿಳಿದು ಹೊಡೆದು ಮುಂದಕ್ಕೆ ಹೋಗುವುದು. ಈ ರೀತಿ ನಡೆಯುತ್ತಿದೆ. ಇದಾದಮೇಲೆ ಒಬ್ಬ ಒಳ್ಳೆಯ ವಕೀಲರನ್ನು ಹಿಡಿದುಕೊಂಡು ಬೇಲ್ ತೆಗೆದುಕೊಂಡು ನಂತರ ಕೇಸ್‌ನ್ನೂ ಕೂಡ ಅಲ್ಲಿಗೇ ಮುಗಿಸಿಹಾಕಿಬಿಡುತ್ತಾರೆ. ಅದಕ್ಕೋಸ್ಕರವೇ, ನಾನು ಹೇಳುತ್ತಿದ್ದೇನೆ, ಈ ಕೇಸ್‌ನಲ್ಲಿ ಸಿ.ಓ.ಡಿ.ಎನ್‌ಕ್ವೈರಿ ಮಾಡಿಸಿ ಯಾರು ಯಾರು ರಾಜಕೀಯ ವ್ಯಕ್ತಿಗಳು ಇದರ ಹಿಂದಿದ್ದಾರೆ ಅವರನ್ನು ಕಂಡುಹಿಡಿದು ಶಿಕ್ಷೆ ಕೊಡಿಸುವ ಕೆಲಸವನ್ನು ನೀವು ಮಾಡಿದರೆ ಇಂಥ ಘಟನೆಗಳು ನಡೆಯುವುದು ನಿಲ್ಲುತ್ತದೆ. ಅದನ್ನು ಬಿಟ್ಟು ಸುಮ್ಮನೆ ಯಾರು ಹೊಡೆದಿದ್ದಾರೆ ಅವರನ್ನು ಹಿಡಿದುಕೊಂಡು ಬಂದುಬಿಡುತ್ತಾರೆ. ಆದರೆ ನಿಜವಾಗಿ ಅವರು ಬಾಡಿಗೆ ಜನರು, ಇವರಿಗೆ ಹಿಂದಿನ ವ್ಯಕ್ತಿಗಳು ದುಡ್ಡುಕೊಟ್ಟು ಇಂಥ ಕೆಲಸ ಮಾಡಲು ಹೇಳಿರುತ್ತಾರೆ, ಪಾಪ ಇವರು ಹೊಡೆದು ದುಡ್ಡು ತೆಗೆದುಕೊಂಡು ಹೋಗುತ್ತಾರೆ, ಆಮೇಲೆ ಅವರನ್ನು ಬಿಡಿಸುವವರು ಇವರೇ. ಆದುದರಿಂದಲೇ ನಾನು ಹೇಳುತ್ತಿರುವುದು, ಸಿ.ಓ.ಡಿ. ತನಿಖೆ ಮಾಡಿಸಿದರೆ ಯಾರು ಯಾರು ಇಂಥ ಬಾಡಿಗೆಜನರನ್ನು ಬಿಡಿಸುತ್ತಾರೆ, ಯಾರು ಯಾರು ಇವರಿಗೆ ದುಡ್ಡು ಕೊಡುತ್ತಾರೆ ಮತ್ತು ಯಾರು ಫೀಡ್ ಮಾಡುತ್ತಾರೆ ಎನ್ನತಕ್ಕಂಥ ವಿಚಾರ ನಿಮಗೆ ಗೊತ್ತಾಗುತ್ತದೆ. ಆದುದರಿಂದ ಈ ಸಂದರ್ಭದಲ್ಲಿ ನಿಮ್ಮನ್ನು ಕೇಳುತ್ತಿದ್ದೇನೆ ಈ ಕೇಸ್‌ನ್ನು ಸಿ.ಓ.ಡಿ. ತನಿಖೆಗೆ ಒಪ್ಪಿಸುತ್ತೀರೋ ಅಥವಾ ಇಲ್ಲವೇ ಎಂಬುದನ್ನು ಹೇಳಬೇಕು. ಇದಲ್ಲದೇ ಈ ಕೇಸ್‌ನಲ್ಲಿ ಯಾರು ಯಾರು ಕಲ್ಪ್ರಿಟ್ ಇದ್ದಾರೆ ಅವರನ್ನು ತಕ್ಷಣ ಹಿಡಿಯಬೇಕು. ಏಕೆಂದರೆ ಇಲ್ಲಿಯವರೆವಿಗೂ ದತ್ತಾತ್ರೇಯ ಅವರನ್ನು ಮರ್ಡರ್ ಮಾಡಿದವರಲ್ಲಿ ಯಾರನ್ನೂ ಹಿಡಿದಿಲ್ಲ. ನೀವು ಓಡಿಹೋಗಿದ್ದಾರೆ ಎಂದು ಹೇಳಿದಿರಿ, ಆದರೆ ಅಲ್ಲಿ ಜೀಪ್ ಇದೆ, ನಾನು ಕೇಳುತ್ತೇನೆ ಮಹೇಂದ್ರ ಜೀಪ್ ನಿಮಗೆ ಅಲ್ಲಿ ಸಿಕ್ಕಮೇಲೆ ಆ

ನಂಬರ್ ಲೈಸೆನ್ಸ್ ಓನರ್ ಯಾರು ಎಂಬುದು ನಿಮಗೆ ಸಿಕ್ಕುವುದಿಲ್ಲವೇ? ಎಲ್ಲಿಗೆ ಓಡಿಹೋದರು? ಅವರೇನು ಸುಮ್ಮನೆ ಗಾಳಿಯಿಂದ ಬಂದರೇ? ದಯವಿಟ್ಟು ಹೇಳಿ ಏಕೆ ಇಲ್ಲಿಯವರೆಗೆ ಅರೆಸ್ಟ್ ಮಾಡಲಿಲ್ಲ ಎಂಬುದನ್ನು ಹೇಳಿ. ಇದರ ಹಿನ್ನೆಲೆ ಏನು? ಯಾವ ರಾಜಕೀಯ ವ್ಯಕ್ತಿಗಳು ಅದರಲ್ಲಿ ಇದ್ದಾರೆ ಎಂಬುದನ್ನು ಹೇಳಿ? ದಯವಿಟ್ಟು ಇದರ ಬಗ್ಗೆ ಹೇಳಬೇಕು.

ಶ್ರೀ ಆರ್.ರೋಷನ್ ಬೇಗ್: ಮಾನ್ಯ ಉಪಾಧ್ಯಕ್ಷರೇ, ದಾಸಪ್ಪ ಬಸಪ್ಪ ದೊಡ್ಡಮನಿಯವರು ದಿನಾಂಕ 17 ರಂದು ಕೊಲೆಯಾದ ಬಗ್ಗೆ ಮತ್ತು ಮೈಲಪ್ಪನವರು 30ನೇ ತಾರೀಖು ಕೊಲೆಯಾದ ಬಗ್ಗೆ ಒಟ್ಟಾರೆ ಈ ಎರಡೂ ಘಟನೆಗಳು ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಏನು ಹೇಳಿದ್ದಾರೆಂದರೆ ಇದಕ್ಕೆ ಪೊಲಿಟಿಕಲ್ ಕನೆಕ್ಷನ್ ಇದೆ, ಯಾವಾಗ ಅವರು ಆ ಭಾಗದಲ್ಲಿ ಸ್ವಲ್ಪ ಅಭಿವೃದ್ಧಿ ಯಾಗುವುದಕ್ಕೆ ಹೋದರೋ ಅದನ್ನು ಸಹಿಸದೇ ಅವರ ಬಗ್ಗೆ ಒಂದು ಕಥೆ ಕಟ್ಟಿ ಮರ್ಡರ್ ಆದಮೇಲೆ ಅವರ ಮೇಲೆ ಐದಾರು ಕೇಸ್‌ಗಳನ್ನು ಮಾಡಿದ್ದಾರೆ, ಐದಾರು ಕೇಸ್ ಹಾಕಿ ಅದರಲ್ಲೂ ವಿಶೇಷವಾಗಿ ದಾಸಪ್ಪ ದೊಡ್ಡಪ್ಪ ದೊಡ್ಡಮನಿ ಕೇಸ್‌ನಲ್ಲಿ ಇವನೊಬ್ಬ ಹಿಸ್ಟರಿ ಶೀಟರ್ ಎಂದೂ, ಈ ಕೇಸ್‌ಗಳೆಲ್ಲಾ ಯಾವಾಗ ಆತ ತಾಲ್ಲೂಕು ಪಂಚಾಯತಿ ಛೇರ್ಮನ್ ಆದನೋ ಅಲ್ಲಿಂದ ಅವನ ಮೇಲೆ ಕೇಸ್‌ಗಳು ಬುಕ್ ಆಗುವುದಕ್ಕೆ ಪ್ರಾರಂಭವಾಗಿದೆ ಎಂದು ಅವರು ಹೇಳಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಹೇಳುತ್ತಿಲ್ಲ. ನೀವು ಕೊಟ್ಟಿರುವ ದಿನಾಂಕಗಳ ಅಂಕಿ ಅಂಶಗಳ ಆಧಾರದ ಮೇಲೆಯೇ ಹೇಳಿದ್ದು.

ಶ್ರೀ ಆರ್.ರೋಷನ್‌ಬೇಗ್: ತಾವು ಏನು ಹೇಳುತ್ತಿದ್ದೀರೆಂದರೆ ಲೋಕಲ್ ಪೋಲಿಸಿನವರು ಕುಕ್‌ಪ್ ಮಾಡಿದ್ದಾರೆಂದು.

ಉಪಾಧ್ಯಕ್ಷರು: ಅವರು ಈಗಾಗಲೇ ನೀವು ಕೊಟ್ಟಿರುವ ಸ್ಟೇಟ್‌ಮೆಂಟ್‌ನೊಳಗೇ ಆ ಅಂಶವಿದೆಯೆಂದು ಹೇಳಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ್ ಖರ್ಗೆ: ಅವರು ಮತ್ತು ಲೋಕಲ್ ಪೋಲಿಸಿನವರು ಆ ಛೇರ್ಮನ್‌ನ್ನು ರೌಡಿ ಶೀಟ್‌ಗೆ ತರತಕ್ಕಂಥ ಕೆಲಸವನ್ನು ಕಳೆದ ಎರಡು ವರ್ಷಗಳಲ್ಲಿ ಮಾಡಿದ್ದಾರೆ ಎಂಬ ಅಂಶ ನೀವು ಕೊಟ್ಟಂಥ ಸ್ಟೇಟ್‌ಮೆಂಟಿನಲ್ಲಿಯೇ ದಿನಾಂಕಗಳ ಆಧಾರಗಳ ಮೇಲೆಯೇ ಗೊತ್ತಾಗುತ್ತದೆ. He is a born rowdy ಅಂದರೆ ನಾನು ಹೇಳುತ್ತಿದ್ದೆ....

ಶ್ರೀ ಆರ್.ರೋಷನ್‌ಬೇಗ್: ವಿರೋಧ ಪಕ್ಷದ ನಾಯಕರು ಏನು ಹೇಳುತ್ತಿದ್ದಾರೆಂದರೆ ಒಬ್ಬ ಹರಿಜನ ಹುಡುಗನ ಮೇಲೆ ಯಾವಾಗ ಒಂದರ ಮೇಲೆ

ಮತ್ತೊಂದು ಹೀಗೆ ಐದಾರು ಕೇಸ್‌ಗಳು ಯಾವಾಗ ಬುಕ್ ಆಯಿತು ಎಂದರೆ, ಯಾವಾಗ ಆತ ಫೇರ್ಮನ್ ಆದನೋ ಅಲ್ಲಿಂದ ಈ ಕೇಸ್‌ಗಳು ಬುಕ್ ಆಗಿವೆ ಎಂದು ಹೇಳುತ್ತಿದ್ದಾರೆ. ನಾನು ಹೇಳುತ್ತೇನೆ There is a basis in his argument... ಆದರೆ ಅವರು ಹೇಳುತ್ತಿದ್ದಾರೆ ಈ ಕೇಸ್‌ನ್ನು ಸಿ.ಓ.ಡಿ.ಗೆ ರೆಫರ್ ಮಾಡಿ ಎಂದಿದ್ದಾರೆ. ನಾವು ಕೂಡಲೇ ಈ ಕೇಸ್‌ನ್ನು ಸಿ.ಓ.ಡಿ.ಗೆ ರೆಫರ್ ಮಾಡಿ ಯಾರು ಅಲ್ಲಿ ಎಫಿಷಿಯೆಂಟ್ ಆಫೀಸರ್ ಇದ್ದಾರೆ ಅವರಿಗೆ ಇದನ್ನು ರೆಫರ್ ಮಾಡಿ ಆ ಭಾಗಕ್ಕೆ ಕಳುಹಿಸಿ ಎನ್‌ಕ್ವೈರಿ ಮಾಡಿಸುತ್ತೇನೆ ಎನ್ನುವ ಭರವಸೆಯನ್ನು ಅವರಿಗೆ ಕೊಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಹೇಳುವುದೇನೆಂದರೆ ನೀವು ಇದುವರೆಗೆ ಏಕೆ ಅವರನ್ನು ಆರೆಸ್ಟ್ ಮಾಡಿಲ್ಲ? ಏಕೆಂದರೆ ಅಲ್ಲಿಯೇ ಜೀಪ್ ಸಿಕ್ಕಿದೆ, ಜೀಪ್‌ನ್ನು ಬಿಟ್ಟು ಅವರು ಓಡಿಹೋಗಿದ್ದಾರೆ. ಆದರೆ ಈ ಕಲ್ಪ್ರಿಟ್ಸ್‌ಗಳು ಇದುವರೆಗೆ ಏಕೆ ಸಿಕ್ಕಿಲ್ಲ.

ಉಪಾಧ್ಯಕ್ಷರು: ಅದಕ್ಕೋಸ್ಕರ ಸಿ.ಓ.ಡಿ.ಎನ್‌ಕ್ವೈರಿ ಅವರು ಮಾಡಿಸುತ್ತೇವೆಂದು ಹೇಳಿದ್ದಾರಲ್ಲಾ.

SRI M.MALLIKARJUNA KHARGE: I am very sorry. ಅದನ್ನು ನಾನು ಹೇಳುತ್ತಿಲ್ಲ. ಅಲ್ಲಿ ಜೀಪ್ ಇದೆ, ಲೈಸೆನ್ಸ್ ಇದೆ, ಹೆಸರು ಎಲ್ಲವೂ ಸಿಕ್ಕಿರುವಾಗ ಇಲ್ಲಿಯವರೆಗೆ ಅವರನ್ನು ಏಕೆ ಹಿಡಿದಿಲ್ಲ? An impartial enquiry for these two cases is a welcome thing. ಈಗಾಗಲೇ 4 ದಿವಸಗಳಾಗಿವೆ.

ಶ್ರೀ ಆರ್.ರೋಶನ್ ಬೇಗ್: ಸಭಾಧ್ಯಕ್ಷರೇ, I have taken note of the suggestions made by the Hon'ble Leader of Oppostion. I will immediately look into it.

(ಈ) ಬಳ್ಳಾರಿ ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿ ಬರಗಾಲ ಕಾಮಗಾರಿಗಳನ್ನು ತೆಗೆದುಕೊಳ್ಳುವುದು.

ಶ್ರೀ ಅಲ್ಲಂ ವೀರಭದ್ರಪ್ಪ (ಕುರಗೋಡು): ಮಾನ್ಯ ಕಂದಾಯ ಮಂತ್ರಿಗಳಲ್ಲಿ ವಿನಂತಿ ಏನೆಂದರೆ, ಬಳ್ಳಾರಿ ಜಿಲ್ಲೆಯಲ್ಲಿ ಮಳೆಯ ಅಭಾವದಿಂದ ಪರಿಸ್ಥಿತಿ ಬಹಳ ಗಂಭೀರವಾಗಿದೆ. ರೈತರು ಇದರಿಂದ ಬಹಳ ಕಂಗಾಲಾಗಿದ್ದಾರೆ. ಅದರೂ ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು 40 ಹಳ್ಳಿಗಳಲ್ಲಿ ಮಳೆ ಬರದೇ ಯಾವ ಕಾಮಗಾರಿಗಳು ನಡೆಯದೇ ಬಹಳ ಕಂಗಾಲಾಗಿದ್ದಾರೆ. ಆದಕಾರಣ ಅವುಗಳನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿ ಬರಗಾಲ ಕಾಮಗಾರಿಗಳನ್ನು ತಕ್ಷಣ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದು ಸರ್ಕಾರದ ಗಮನಕ್ಕೂ ಬಂದಿದೆಯಲ್ಲದೆ